

# ಸೇರಿಗೆ ಸವ್ವಾ ಸೇರು

ಕಾಡಿನ ರಾಜ ಸಿಂಹಕ್ಕೆ ನರಿಯೊಂದು ಬಾವಿಯೊಳಗೆ ನೀರಿನಲ್ಲಿ ಅದರ ಪ್ರತಿಬಿಂಬ ತೋರಿಸಿ ಅದರೊಂದಿಗೆ ಹೋರಾಡಲು ಬಾವಿಯೊಳಗೆ ಹಾರಿ ನೀರಲ್ಲಿ ಮುಳುಗಿ ಪ್ರಾಣಬಿಟ್ಟ ಸಿಂಹದ ಕಥೆಯನ್ನು ನಾವೆಲ್ಲರೂ ಕೇಳಿದ್ದೇವೆ. ಹೀಗೆ ನಾಲ್ಕು ವರ್ಷ ಕಳೆಯಿತು. ಬೆಳೆದು ದೊಡ್ಡದಾದ ಅದರ ಮರಿ ಅವರಿವರಿಂದ ವಿಚಾರ ತಿಳಿದು ಹೇಗಾದರೂ ಮಾಡಿ ನರಿಯನ್ನು ಅದೇ ಬಾವಿಗೆ ತಳ್ಳಿ ಸೇಡು ತೀರಿಸಿಕೊಳ್ಳಲು ಯೋಚಿಸಿತು.

ಒಂದು ದಿನ ಅದೇ ನರಿ ಬಾವಿಯ ಹತ್ತಿರ ಬರುತ್ತಿದ್ದುದನ್ನು ಗಮನಿಸಿದ ಮರಿ ಸಿಂಹ ಬಾವಿಯೊಳಗೆ ಬಗ್ಗಿ ಏನೋ ನೋಡುತ್ತಿರುವಂತೆ ನಟಿಸಿತು. ಅದನ್ನು ನೋಡಿದ ನರಿ 'ಏನು ಸಿಂಗಣ್ಣ.. ಏನೋ ಬಾವಿಯಲ್ಲಿ ಹುಡುಕುತ್ತಿರುವಂತಿದೆ' ಎಂದಿತು.

'ಏನಿಲ್ಲ, ನನ್ನಪ್ಪ ಇದೇ ಬಾವಿಯಲ್ಲಿ ಜಾರಿ ಬಿದ್ದು ಸತ್ತನಂತೆ. ಸಾಧುವೊಬ್ಬರಿಂದ ದಿವ್ಯದೃಷ್ಟಿ ಪಡೆದ ನಾನು ಬಾವಿಯಲ್ಲಿ ಇಣುಕಿ ನೋಡಿದರೆ ಬಾವಿ ಒಣಗಿ ಅಪ್ಪನ ಪಳೆಯುಳಿಕೆ ಚಿನ್ನವಾಗಿ ಮಾರ್ಪಟ್ಟಿದೆ. ಅದನ್ನು ತೆಗೆದು ಸಂತೆಯಲ್ಲಿ ಮಾರಿದರೆ ಸಾಕಷ್ಟು ಹಣ ಸಂಪಾದಿಸಬಹುದು. ನಾಳೆ ಇಳಿದು ಅದನ್ನು ಹೊರಗೆ ತರೋಣವೆಂದುಕೊಂಡಿದ್ದೇನೆ' ಎಂದಿತು ಮರಿ ಸಿಂಹ.

ನರಿಗೆ ಬಾಯಲ್ಲಿ ನೀರೂರಿತು. ಈ ಕೆಲಸ ನಾನೇ ಏಕೆ ಮಾಡಬಾರದು? ಅದು ಬಾವಿಯೊಳಗೆ ಬೀಳಲು ಉಪಾಯ ಮಾಡಿದ್ದು ನಾನೇ. ಅಂದ ಮೇಲೆ ಚಿನ್ನಕ್ಕೆ ನಿಜವಾದ ವಾರಸುದಾರ ನಾನೇ ಅಲ್ಲವೇ? ಹೇಗಾದರೂ ಮಾಡಿ ಅದರ ಬಾಯಿ ಬಿಡಿಸೋಣವೆಂದು ಸಿಂಹವನ್ನು ಕುರಿತು ಗಹಗಹಿಸಿ ನಗುತ್ತ 'ಅಯ್ಯೊ ಪೆದ್ದೆ, ಈ ಬಾವಿಯ ಆಳ ಎಷ್ಟಿದೆ ಅಂತ ನಿನಗೇನು ಗೊತ್ತು? ಅದರಲ್ಲಿ ಇಳಿಯುವ ಬಗೆಯಾದರೂ ಹೇಗೆ? ಒಂದು ವೇಳೆ ಇಳಿದೆ ಅಂದ್ಕೊಳ್ಳೋಣ. ಆದರೆ ಮೇಲೆ ಬರುವ ಬಗೆ ಹೇಗೆ? ಪೆದ್ದುಪೆದ್ದಾಗಿ ನಿನ್ನ ಅಪ್ಪನ ತರಹ ನೀನೂ ಬಾವಿಗೆ ಬಿದ್ದು ಸಾಯಬೇಡ' ಎಂದಿತು.

ಸಿಂಹ ಒಂದಿಷ್ಟೂ ಕೋಪಗೊಳ್ಳದೇ ಸಹನೆಯಿಂದ 'ಇಲ್ಲ ನರಿಯಣ್ಣ, ನಾನು ಸಾಧು ಕೊಟ್ಟ ದಿವ್ಯದೃಷ್ಟಿಯಿಂದ ಗಮನಿಸಿದೆ. ಬಾವಿಯೊಳಗೆ ಸುರಂಗಮಾರ್ಗವಿದೆ. ಅದರ ಮುಖಾಂತರ ಆರಾಮವಾಗಿ ಹೊರಗೆ ಬರಬಹುದು. ಅದೋ, ದೂರದಲ್ಲಿ ಬಾವಿ ಕಾಣುತ್ತಿದೆಯಲ್ಲ. ಅಲ್ಲಿದ್ದ ಹಗ್ಗವನ್ನು ಬಳಸಿಕೊಂಡರೆ ಮುಕ್ಕಾಲು ಬಾವಿ ಇಳಿಯಬಹುದು. ಆ ಮೇಲೆ ಕೆಳಗೆ ಹಾರಿದರಾಯ್ತು. ಬರ್ತೀನಿ ನರಿಯಣ್ಣ. ನಾಳೆಗೆ ತಯಾರಿ ಮಾಡಬೇಕು' ಎಂದು ಅಲ್ಲಿಂದ ಹೊರಟಿತು.

ಹಿರಿ ಹಿರಿ ಹಿಗ್ಗಿತು ನರಿ. ಈ ಮೂರ್ಖ ಸಿಂಹಕ್ಕೆ ಗುಟ್ಟು ಮಾಡಲೂ ಬರುವುದಿಲ್ಲ. ಅದು ನಾಳೆ ತಾನೆ ಬರೋದು. ನಾನು ಈಗಲೇ ಇಳಿದು ಅಷ್ಟೂ ಚಿನ್ನವನ್ನು ತೆಗೆದುಕೊಳ್ಳುವೆ ಎಂದು ಆಲೋಚಿಸಿ ಕ್ಷಣಾರ್ಧದಲ್ಲಿ ಹಗ್ಗ ತಂದು ಬಾವಿಯಲ್ಲಿ ಇಳಿದೇ ಬಿಟ್ಟಿತು ನರಿ. ಇಳಿದು ನೋಡಿದರೆ ಚಿನ್ನವೂ ಇಲ್ಲ, ಸುರಂಗ ಮಾರ್ಗವೂ ಇಲ್ಲ.

ಬಿದ್ದ ರಭಸಕ್ಕೆ ಬೆನ್ನಿನ ಮೂಳೆ ಮುರಿದಿತ್ತು. ದೂರದಲ್ಲಿ ಎಲ್ಲವನ್ನೂ ನೋಡಿ ನಗುತ್ತಿದ್ದ ಸಿಂಹ ಬಾವಿಯ ಹತ್ತಿರ ಬಂದು 'ಎಲೈ ಗುಳ್ಳೆ ನರಿ. ನನ್ನ ಅಪ್ಪನನ್ನು ಕೊಂದೆಯಲ್ಲ. ನಿನಗೆ ತಕ್ಕ ಶಾಸ್ತಿ ಮಾಡಿದ್ದೇನೆ. ಅನುಭವಿಸು' ಎನ್ನುತ್ತಾ ನರಿಯ ಉತ್ತರಕ್ಕೂ ಕಾಯದೇ ಹೊರಟೇ ಬಿಟ್ಟಿತು.

**–ಮೂಲೆಮನೆ ರತ್ನಾಕರ ಭಿಡೆ**